# ವಿವಿಧ ಕ್ಷೇತ್ರದ 17 ಸಾಧಕರಿಗೆ ಮಾಣಿಕ್ಯ ಪ್ರಕಾಶನದ 2025 ನೇ ಸಾಲಿನ ಪ್ರಶಸ್ತಿಗಳು ಪ್ರಕಟ

ಹಾಸನ : ಮಾಣಿಕ್ಯ ಪ್ರಕಾಶನ(ರಿ.), ಹಾಸನ ವತಿಯಿಂದ ನವೆಂಬರ್ 02 ಭಾನುವಾರ ನಗರದ ಸಂಸ್ಕೃತ ಭವನದಲ್ಲಿ ಹಮ್ಮಿಕೊಳ್ಳುವ ದಶಮಾನೋತ್ಸವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ರಾಜ್ಯ ಹಾಗೂ ಹೊರರಾಜ್ಯದ 17 ಸಾಧಕರಿಗೆ 2025 ನೇ ಸಾಲಿನ ಮಾಣಿಕ್ಯ ಪ್ರಕಾಶನದ ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಾಶಕಿ ದೀಪಾ ಉಪ್ಪಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೇಂದ್ರ ಕನ್ನಡ ಸಾಹಿತ್ಯ ವೇದಿಕೆ ಸಂಸ್ಥಾಪಕ ಅಧ್ಯಕ್ಷ ಕೊಟ್ರೇಶ್ ಎಸ್. ಉಪ್ಪಾರ್, ಟ್ರಸ್ಟಿಗಳಾದ ನಾಗರಾಜ್ ದೊಡ್ಡಮನಿ, ಎಚ್.ಎಸ್.ಬಸವರಾಜ್, ವಾಸು ಸಮುದ್ರವಳ್ಳಿ, ದೇಸು ಆಲೂರು, ಡಾ. ಪಿ. ದಿವಾಕರ ನಾರಾಯಣ, ಬೆಳಗಾವಿ ಜಿಲ್ಲಾಧ್ಯಕ್ಷೆ ಸುಶೀಲಾ ಲ. ಗುರವ ಅವರನ್ನೊಳಗೊಂಡ ಆಯ್ಕೆ ಸಮಿತಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಈ ಕೆಳಕಂಡ ಸಾಧಕರನ್ನು ವಿವಿಧ ಪ್ರಶಸ್ತಿಗೆ ಆಯ್ಕೆ ಮಾಡಿದ್ದಾರೆ.

ಸಾಹಿತಿ ಟಿ.ಸತೀಶ್ ಜವರೇಗೌಡ, ಪತ್ರಕರ್ತ ಹೆತ್ತೂರು ನಾಗರಾಜುರವರು ಹೊಯ್ಸಳ ಸಾಂಸ್ಕೃತಿಕ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ, ಸಮಾಜ ಸೇವಕ ಗಣೇಶ್ ತಮ್ಲಾಪುರ ಜನ್ನ ಕಾವ್ಯ ಪ್ರಶಸ್ತಿ ಪ್ರದಾನ ಮಾಡಿದರೆ, ಸಾಹಿತಿ ಡಾ. ಎಚ್.ಕೆ. ಹಸೀನಾರವರು ಹೊಯ್ಸಳ ಸಾಹಿತ್ಯ ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

## ಹೊಯ್ಸಳ ಸಾಂಸ್ಕೃತಿಕ ರಾಜ್ಯ ಪ್ರಶಸ್ತಿ ಪುರಸ್ಕೃತರು

ಪ್ರಕಾಶ್ ಜಿ, ಹಾಸನ. (ಸಾಹಿತ್ಯ), ಡಾ. ರಘುಕೋಟಿ, ಕೊಡಗು (ಮಾಧ್ಯಮ), ಡಾ.ಎಚ್.ಎಲ್.ಶಿವಬಸಪ್ಪ, ಮೈಸೂರು(ಸಾಹಿತ್ಯ), ಕೆ. ಎಸ್. ಮಂಜುನಾಥ್ ಪಂಡಿತ್, ಅರಸೀಕೆರೆ. (ಸಂಘಟನೆ), ಆರ್.ಎಸ್.ರಮೇಶ್, ಹಾಸನ (ಕನ್ನಡ ನುಡಿಸೇವೆ),

    

## ರಾಜ್ಯ ಮಟ್ಟದ ಜನ್ನ ಕಾವ್ಯ ಪ್ರಶಸ್ತಿ ಪುರಸ್ಕೃತರು

ಡಿ.ಸುಜಲಾದೇವಿ, ಕೊಡಗು; ಫ್ಲಾವಿಯಾ ಅಲ್ಬುಕರ್ಕ್, ದಕ್ಷಿಣ ಕನ್ನಡ; ನಾಗಭೂಷಣ್ ಅರಳಿ, ಕೊಪ್ಪಳ; ರೇಖಾ ಪ್ರಕಾಶ್, ಹಾಸನ; ಸುಜಾತ ಎಸ್. ಹೇಮಂತ್, ಶಿವಮೊಗ್ಗ; ಬಿ.ಯು. ಭೈರಕದಾರ, ಬೆಳಗಾವಿ

     

## ಹೊಯ್ಸಳ ಸಾಹಿತ್ಯ ರಾಜ್ಯ ಪ್ರಶಸ್ತಿ ಪುರಸ್ಕೃತರು

ಶರಣಪ್ಪ ತಳ್ಳಿ ಕುಪ್ಪಿಗುಡ್ಡ, ಕೊಪ್ಪಳ; ಅಶ್ವತ್ಥಪ್ಪ ಕರ್ನೂಲು, ಆಂಧ್ರಪ್ರದೇಶ; ಡಾ. ಪಾರ್ವತಿದೇವಿ ಪಾಟೀಲ, ಬೆಳಗಾವಿ; ದೀಪಾಲಿ ದೀಪಕ ಸಾಂತ, ಉತ್ತರ ಕನ್ನಡ; ವೈ.ಬಿ. ಕಾಂತರಾಜ್, ಹಾಸನ; ಹಣಮಂತ ಫ. ನಾಯಕ, ಬೆಳಗಾವಿ.

     